CC 89/2013 Pw-2

# ಸಿ.ಸಿ.ನಂ.89/2013

ಹೆಸರು ಃ ನಾಗರಾಜು

ತಂದೆಯ ಹೆಸರು ಃ ಸಿದ್ದೇಗೌಡ

ವಯಸ್ಸು ಃ 40 ವರುಷ

ವೃತ್ತಿ ಃ ಗ್ಯಾಸ್ ಪೈಪ ಲೈನ್

ವಾಸ ಃ ಬೆಂಗಳೂರು

ಸಾಕ್ಷಿಯನ್ನು ಕರೆಯಿಸಿ ದಿನಾಂಕ 22.09.2025 ಪ್ರಮಾಣವಚನ ಬೋದಿಸಲಾಯಿತು.

**ದಂಡ ಪ್ರಕ್ರಿಯೆ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ಹೇಳಿಕೆಯನ್ನು ದಾಖಲಿಸಲಾಯಿತು**

2013 ರಲ್ಲಿ ನಾನು ಅಯುಧ ಪೂಜೆ ಮುಗಿಸಿ ಬೆಂಗಳೂರಿನಿಂದ ಊರಿಗೆ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದಾಗ ಪುರದೊಡ್ಡಿ ಗೇಟ್ ಬಳಿ 5 ಜನರು ಟಾಟಾ ಇಂಡಿಕಾ ಕಾರಿನಲ್ಲಿ ಬಂದು ನನ್ನ ಮೇಲೆ ದಾಳಿ ಮಾಡಿರುತ್ತಾರೆ. ನನ್ನ ಎದೆಗೆ ಚಾಕುವಿನಿಂದ ಚುಚ್ಚಿ ರುತ್ತಾರೆ. ನನ್ನ ದ್ವಿಚಕ್ರ ವಾಹನವನ್ನು ಕಿತ್ತುಕೊಂಡಿರುತ್ತಾರೆ. ನನ್ನ ಬಳಿ ಇದ್ದ ನೋವಾ ಎನ್ 65 ಮೊಬೈಲ್ ಮತ್ತು 3 ಸಾವಿರ ನಗದ್ದನ್ನು ಕಿತ್ತುಕೊಂಡಿರುತ್ತಾರೆ. ನಂತರ ನಾನು ಹಲಗೂರು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ನಾನು ಮಳವಳ್ಳಿ ಮಂಡ್ಯ, ನಂತರ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ದ್ವಿಚಕ್ರವಾಹನವು ಸಿಕ್ಕಿದ್ದು, ಅದನ್ನು ನನ್ನ ವಶಕ್ಕೆ ಪಡೆದಿರುತ್ತೇನೆ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.